(ಇಂದು ದಿನಾಂಕ 15-07-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು – ಪ್ರತಿವಾದಿಯರ ಪರ ಶ್ರೀ ಡಿ.ಎಸ್.ಭಟ್ಟ ವಕೀಲರಿಂದ–**

ದಾವೆಯೊಂದಿಗೆ ಸಲ್ಲಿಸಲಾದ ಹಾತ್ ನಕಾಶೆಯನ್ನು ತಯಾರಿಸಲು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ದಾವಾಸ್ತಿಗಳಿಗೆ ಸಂಬಂಧಪಟ್ಟಂತಹ ಸರ್ವೆ ನಕಾಶೆ ಅಥವಾ ಹಿಸ್ಸಾ ನಕಾಶೆಯನ್ನು ಪರಿಶೀಲಿಸಿರುವುದಿಲ್ಲ, ಆದರೆ ಗ್ರಾಮ ನಕಾಶೆಯನ್ನು ಪರಿಶೀಲಿಸಿರುತ್ತೇನೆ. ನಾನು ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ನನ್ನ ವಕೀಲರಿಗೆ ದಾವಾ ಸ್ವತ್ತುವಿನಲ್ಲಿ ವಿವರಿಸಲಾದ ಸರ್ವೆ ನಂಬರಗಳ ಚತುರ್ಗಡಿಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತೇನೆ.

ಸ.ನಂ. 316/3 ರ ಚತುರ್ಗಡಿಯನ್ನು ಹೇಳಲು ಆಗುವುದಿಲ್ಲ. ಸ.ನಂ. 312/1 ರಲ್ಲಿ ದಾವೆಯಲ್ಲಿ ಹೇಳಲಾದ ದಾರಿಯು ಹಾದು ಹೋಗುತ್ತದೆ, ಆದರೆ ಯಾವುದೇ ಪೈಪ ಲೈನ್ ಇರುವುದಿಲ್ಲ. ಸ.ನಂ. 312/1 ರ ಉತ್ತರಕ್ಕೆ ಸ.ನಂ. 316/3 ರ ಸ್ವತ್ತು ಇದೆ. ಸ.ನಂ. 312/1 ರ ದಕ್ಷಿಣಕ್ಕೆ ಜನಾರ್ಧನ ನಾಯ್ಕ ವಗೈರೆ ಇವರ ಮನೆ ಹಾಗೂ ಸ್ಥಳ ಇದೆ. ಸ.ನಂ. 312/1 ರ ಪಶ್ಚಿಮಕ್ಕೆ ಸುಲೋಚನಾ ಕೋಂ ಜನಾರ್ಧನ ಭಟ್ಟರವರ ಜಾಗ ಇದೆ. ಸ.ನಂ. 312/1 ರ ಪೂರ್ವಕ್ಕೆ ವಿನಾಯಕ ನರಸಿಂಹ ಭಟ್ಟ ಹಾಗೂ ಇತರ ಇಬ್ಬರಿಗೆ ಸೇರಿದ ಜಾಗ ಇದೆ. ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ಸ.ನಂ. 312/1 ರ ಪಹಣಿಪತ್ರಿಕೆಯನ್ನು ನೋಡಿರುತ್ತೇನೆ. ಸ.ನಂ. 312/1 ಕ್ಕೆ ನಾಗೇಶ ವೆಂಕಟ್ರಮಣ ಭಟ್ಟ ಎನ್ನುವವರು ಮಾಲಿಕರಾಗಿದ್ದು, ಪ್ರಸ್ತುತ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ. ನಾನು ದಾವೆಯೊಂದಿಗೆ ಲಗತ್ತಿಸಲಾದ ಹಾತ್ ನಕಾಶೆಯನ್ನು ಸ.ನಂ. 312/1 ರ ಪಶ್ಚಿಮ ದಿಕ್ಕಿಗೆ ರಾಜ ರಸ್ತೆ ಇದೆ ಎಂದು ತಿಳಿಸಿದ್ದೇನೆ ಎಂದರೆ ಸರಿ.

ಸ.ನಂ. 316/3 ರಲ್ಲಿ ನನ್ನ ಹಕ್ಕಿಗೆ ಒಳಪಟ್ಟ ಯಾವುದೇ ಬಾವಿ ಇರುವುದಿಲ್ಲ. ಸ.ನಂ. 313/3 ರ ಉತ್ತರ ದಿಕ್ಕಿಗೆ ಸುಬ್ರಾಯ ಕೃಷ್ಣ ಭಟ್ಟ ಹಾಗೂ ಸಾಂಬಶಿವ ಕೃಷ್ಣ ಭಟ್ಟ ಇವರ ಜಾಗ ಇದೆ. ಅದರ ಸ.ನಂ. ನನಗೆ ತಿಳಿದಿಲ್ಲ. ಸ.ನಂ. 313/3 ರ ದಕ್ಷಿಣಕ್ಕೆ ನಾಗೇಶ ವೆಂಕಟ್ರಮಣ ಭಟ್ಟರವರ ಜಾಗ ಇದೆ. ಪೂರ್ವಕ್ಕೆ ಸ.ನಂ. 349/1 ರ ಸ್ವತ್ತು ಇದೆ. ಸ.ನಂ. 313/3 ರ ಪಶ್ಚಿಮಕ್ಕೆ ಈಶ್ವರ ರಾಮಾ ಭಟ್ಟ ಇವರ ಸ್ವತ್ತು ಇದ್ದು, ಅದರ ಸ.ನಂ. 313/1 ಹಾಗೂ 313/2 ಆಗಿರುತ್ತದೆ. ನಾನು ಸ.ನಂ. 313/3 ಹಾಗೂ 316/3 ರ ಚತುರ್ಗಡಿಗಳನ್ನು ವಿಚಾರಣೆಯ ಸಂದರ್ಭದಲ್ಲಿ ಹೇಳಿದಂತೆಯೇ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನನ್ನ ವಕೀಲರಿಗೆ ಮಾಹಿತಿ ನೀಡುವ ಸಂದರ್ಭದಲ್ಲಿ ಸಹ ತಿಳಿಸಿರುತ್ತೇನೆ. ನನ್ನ ವಕೀಲರು ತಯಾರಿಸಿದ ವಾದ ಪತ್ರ ಹಾಗೂ ಅದಕ್ಕೆ ಲಗತ್ತಿಸಲಾದ ನಕಾಶೆಯನ್ನು ನಾನು ನೋಡಿ ಪರಿಶೀಲಿಸಿರುತ್ತೇನೆ.

ಸ.ನಂ. 313/3 ರ ದಕ್ಷಿಣ ದಿಕ್ಕಿಗೆ ಸ.ನಂ. 312/1 ರ ಜಮೀನು ಇದೆ ಎಂದರೆ ಇರಬಹುದು, ನನಗೆ ಸರ್ವೆ ನಂಬರ ಹೇಳಲು ತಿಳಿಯುವುದಿಲ್ಲ. ಸ.ನಂ. 316/3 ರಲ್ಲಿ ಇರುವ ನಮಗೆ ಸೇರಿದ 3 ಮನೆಗಳಿಗೆ ಸಂಪರ್ಕವನ್ನು ಕಲ್ಪಿಸಲು 3 ಪ್ರತ್ಯೇಕವಾದ ದಾರಿಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸ.ನಂ. 316/3 ರ ಉತ್ತರಕ್ಕೆ ಸ.ನಂ. 316/1 ರ ಸ್ವತ್ತು ಇದೆ ಎಂದರೆ ಇರಬಹುದು, ನನಗೆ ಸರ್ವೆ ನಂಬರ್ ಹೇಳಲು ತಿಳಿಯುವುದಿಲ್ಲ. ಸ.ನಂ. 316/3 ಉತ್ತರ ದಿಕ್ಕಿಗೆ ಇರುವ ಸ.ನಂ. 316/1 ರ ಮಾಲಿಕರು ಈಶ್ವರ ಭಟ್ಟರವರಾಗಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸ.ನಂ. 316/1 ರ ಉತ್ತರಕ್ಕೆ ಸ.ನಂ. 317/5ಬ ದ ಸ್ವತ್ತು ಇದೆ ಎಂದರೆ ಸರಿ. ಸದರಿ ಸ್ವತ್ತು ಅಂದರೆ ಸ.ನಂ. 317/5ಬ ಈಶ್ವರ ರಾಮಾ ಭಟ್ಟರವರಿಗೆ ಸೇರಿದ ಸ್ವತ್ತು ಆಗಿರುತ್ತದೆ. ಸ.ನಂ. 316/1 ಹಾಗೂ ಸ.ನಂ. 317/5ಬ ದ ಸ್ವತ್ತುಗಳ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ. ಸ.ನಂ. 316/1 ಹಾಗೂ ಸ.ನಂ. 317/5ಬ ದ ಸ್ವತ್ತುಗಳ ಮಧ್ಯಭಾಗದಲ್ಲಿ ಒಂದು ಬಾವಿ ಇತ್ತು ಎಂದರೆ ಸರಿ. ಸ.ನಂ.317/5ಬ ದಲ್ಲಿ ಬೋರವೆಲ್ ತೆಗೆಸಲಾಗಿರುತ್ತದೆ. ಸದರಿ ಬೋರವೆಲ್‌ನ್ನು ಪ್ರಸ್ತುತ

ದಾವೆಯನ್ನು ದಾಖಲಿಸುವ 5 ರಿಂದ 6 ವರ್ಷಗಳ ಪೂರ್ವದಲ್ಲಿ ತೆಗೆಸಲಾಗಿರುತ್ತದೆ. ಸದರಿ ಬೋರವೆಲ್‌ನ್ನು ಈಶ್ವರ ರಾಮಾ ಭಟ್ಟರವರು ತೆಗೆಸಿರುತ್ತಾರೆ. ಸ.ನಂ. 317/5ಬ ದಲ್ಲಿ ಇರುವ ಬೋರವೆಲ್‌ನಿಂದಸ.ನಂ. 316/3 ರಲ್ಲಿ ಇರುವ ನಮ್ಮ ಮನೆಗಳಿಗೆ ನೀರಿನ ಸಂಪರ್ಕವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಸ.ನಂ. 316/3 ರಲ್ಲಿ ಇರುವ ನಮ್ಮ 3 ಮನೆಗಳಿಗೆ ಬೋರವೆಲ್‌ನಿಂದ ನೀರಿನ ಸಂಪರ್ಕ ಪಡೆದುಕೊಂಡಿರುವ ಬಗ್ಗೆ ನಮ್ಮ ನಡುವೆ ಯಾವುದೇ ರೀತಿಯ ಕರಾರು ಆಗಿರುವುದಿಲ್ಲ. ಬೋರವೆಲ್‌ನಿಂದ ಸ.ನಂ. 316/3 ರಲ್ಲಿ ಇರುವ ನಮ್ಮ ಮನೆಗಳಿಗೆ ನೀರಿನ ಸೌಲಭ್ಯವನ್ನು 2016 ನೇ ಸಾಲಿನ ನಂತರದಲ್ಲಿ ಪಡೆದುಕೊಂಡಿರುತ್ತೇವೆ.

ಬೋರವೆಲ್‌ನಿಂದ ನೀರಿನ ಸೌಲಭ್ಯ ಪಡೆದುಕೊಳ್ಳುವ ಪೂರ್ವದಲ್ಲಿ ಸ.ನಂ. 314/8 ರಲ್ಲಿ ಇದ್ದಂತಹ ಪಂಪಸೆಟ್ ಮೂಲಕ ನಮಗೆ ಅವಶ್ಯಕತೆ ಇರುವ ನೀರನ್ನು ಪಡೆದುಕೊಂಡು ಉಪಯೋಗಿಸುತ್ತಿದ್ದೆವು. ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ಸ.ನಂ. 314/8 ರ ಪಂಪಸೆಟ್‌ನಿಂದ 316/3 ರ ಸ್ವತ್ತುಗಳಿಗೆ ನೀರಿನ ಸೌಲಭ್ಯ ಸಿಗುತ್ತಿತ್ತು ಎಂಬ ಮಾಹಿತಿಯನ್ನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ಸ.ನಂ. 314/8 ರ ಸ್ವತ್ತು ನನ್ನ ಹಾಗೂ ಶಂಕರ ಶಂಭು ಭಟ್ಟ, ಕೃಷ್ಣಾ ಶಂಭು ಭಟ್ಟ , ಜಾನಕಿ ಕೋಂ ವಿಘ್ನೇಶ್ವರ ಭಟ್ಟ ರವರ ಹಕ್ಕಿಗೆ ಒಳಪಟ್ಟ ಸ್ವತ್ತು ಆಗಿದೆ. ಸ.ನಂ. 314/8 ರಲ್ಲಿ ಈಗಲೂ ಸಹ ಬಾವಿ ಅಸ್ತಿತ್ವದಲ್ಲಿದೆ.

ಸ.ನಂ. 314/8 ರ ಸ್ವತ್ತಿನಿಂದ 316/3 ಕ್ಕೆ ಇದ್ದಂತಹ ನೀರಿನ ಸಂಪರ್ಕದ ಪೈಪನ್ನು ಫೆಬ್ರವರಿ 2016 ನೇ ಇಸವಿಯಲ್ಲಿ 1 ರಿಂದ 4 ನೇ ಪ್ರತಿವಾದಿಗಳು ಒಡೆದಿರುತ್ತಾರೆ. ಸ.ನಂ. 316/3 ಕ್ಕೆ ಇದ್ದಂತಹ ನೀರಿನ ಸಂಪರ್ಕದ ಪೈಪ್ 1 ರಿಂದ 4 ನೇ ಪ್ರತಿವಾದಿಗಳ ಸ್ವತ್ತುಗಳಾದ ಸ.ನಂ. 314/4, 315/2 ರಲ್ಲಿ ಹಾದು ಹೋಗಿದ್ದು, ಸದರಿ ಸ್ವತ್ತುಗಳಲ್ಲಿ ಅವರು ಪೈಪ್‌ನ್ನು ಒಡೆದಿರುತ್ತಾರೆ.

ಸ.ನಂ. 314/8 ರ ಪೂರ್ವಕ್ಕೆ ವಿನಾಯಕ ನರಸಿಂಹ ಭಟ್ಟ ಹಾಗೂ ಅವರ ಕುಟುಂಬದವರ ಸ್ವತ್ತು, ಪಶ್ಚಿಮಕ್ಕೆ ವಿಘ್ನೇಶ್ವರ ಗಜಾನನ ಭಟ್ಟ ರವರ ಸ್ವತ್ತು, ಉತ್ತರಕ್ಕೆ ಗಜಾನನ ಸುಬ್ರಾಯ ರವರ ಸ್ವತ್ತು ಇರಬಹುದು ಮತ್ತು ದಕ್ಷಿಣಕ್ಕೆ 1 ರಿಂದ 4 ನೇ ಪ್ರತಿವಾದಿಗಳಿಗೆ ಸೇರಿದ ಸ.ನಂ. 314/4 ರ ಸ್ವತ್ತು ಇದೆ.

**(ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ